ಆ) ಸದರಿ ಗಜನಿ ರೈತರ ಪೈಕಿ ನ್ಯಾಯಾಲಯಕ್ಕೆ ಹೋಗದ ರೈತರಿಗೆ 1 ಗಂಟೆಗೆ ರೂ.40 ರಂತೆ ಪರಿಹಾರ ನೀಡಿದ್ದು, ನ್ಯಾಯಾಲಯಕ್ಕೆ ಹೋದವರಿಗೆ ನೀಡಿದಂತೆ ಹೆಚ್ಚಿನ ಪರಿಹಾರ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸಂಕಷ್ಟದಲ್ಲಿರುವ ಅಂತಹ ರೈತರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಈ) ಯಾವಾಗ ಪರಿಹಾರ ನೀಡಲಾಗುವುದು?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಹೌದು.

ಇ) ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸದೇ ಇರುವ ಭೂಮಾಲೀಕರಿಗೆ ಹೆಚ್ಚುವರಿ ಪರಿಹಾರ ಧನ ನೀಡಲು ಭೂಸ್ವಾಧೀನ ಅಧಿನಿಯಮದಲ್ಲಿ ಅವಕಾಶ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

640 (1131) ಶ್ರೀ ಮುನಿಯಪ್ಪ ಎಸ್.ಎಂ. (ಚಿಕ್ಕಬಳ್ಳಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ಉಪ ವಿಭಾಗ ಕೇಂದ್ರವಾಗಿದ್ದು, ಆರು ತಾಲ್ಲೂಕುಗಳನ್ನು ಒಳಗೊಂಡಿದ್ದು, ತಾಲ್ಲೂಕು ಕಛೇರಿ ಶಿಥಿಲವಾಗಿರುವ ಹಂತಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಉಪ ವಿಭಾಗಕ್ಕೆ ಸೇರಿದ ಗೌರಿಬಿದನೂರು, ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ ತಾಲ್ಲೂಕು ಕೇಂದ್ರಗಳಲ್ಲಿ ಈಗಾಗಲೇ ಮಿನಿ ವಿಧಾನಸೌಧಗಳು ನಿರ್ಮಾಣಗೊಂಡಿದ್ದು, ಚಿಕ್ಕಬಳ್ಳಾಪುರವನ್ನು ಕಡೆಗಣಿಸಿರುವುದು ಸರಿಯೇ;

ಇ) ಈಗಾಗಲೇ ಅನೇಕ ಮನವಿಗಳನ್ನು ಸಲ್ಲಿಸಿದ್ದರೂ ಸರ್ಕಾರ ಗಮನಹರಿಸದೇ ಇರಲು ಕಾರಣವೇನು;

ಈ) ಈಗಲಾದರೂ ಚಿಕ್ಕಬಳ್ಳಾಪುರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಬಂದಿರುತ್ತದೆ.

ಆ) ಸರ್ಕಾರವು ಪ್ರತಿ ತಾಲ್ಲೂಕು ಪಟ್ಟಣದಲ್ಲಿ ಎಲ್ಲಾ ಕಛೇರಿಗಳನ್ನು ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಉದ್ದೇಶದಿಂದ ಮಿನಿ ವಿಧಾನಸೌಧ ನಿರ್ಮಿಸುವ ಒಂದು ಯೋಜನೆ ಹಮ್ಮಿಕೊಂಡಿದೆ. ಈ ಯೋಜನೆಯನ್ನು ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ಕಾರ್ಯಗತಗೊಳಿಸಲಾಗುತ್ತಿದೆ. ಚಿಕ್ಕಬಳ್ಳಾಪುರದಲ್ಲಿ ಸಹ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಸಂಪನ್ಮೂಲ ವ್ಯವಸ್ಥೆ ಆಗುತ್ತಲೇ ಮುಂದಿನ ಕ್ರಮ ಜರುಗಿಸಲಾಗುವುದು.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸಂಪನ್ಮೂಲಗಳ ವ್ಯವಸ್ಥೆ ಆಗುತ್ತಲೆ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದು.

641 (577) ಶ್ರೀ ಪಾಟೀಲ್ ಡಿ.ಆರ್. (ಗದಗ್): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀ ಧರ್ಮಸಿಂಗ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಬಾಕಿ ಎಷ್ಟಿತ್ತು;

ಆ) ಶ್ರೀ ಧರ್ಮಸಿಂಗ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಸಣ್ಣ ಕೈಗಾರಿಕೆಗಳಿಗೆ ಎಷ್ಟು ಸಹಾಯಧನ ವಿತರಿಸಲಾಯಿತು;

ಇ) ಪ್ರಸಕ್ತ ಕಾಲದಲ್ಲಿ ರಾಜ್ಯದ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಬಾಕಿ ಎಷ್ಟಿದೆ;

ಈ) ಈ ಬಾಕಿಯನ್ನು ಕೈಗಾರಿಕೆಗಳಿಗೆ ನೀಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಉ) ಹಾಗಿದ್ದಲ್ಲಿ, ಎಷ್ಟು ಕಾಲದಲ್ಲಿ ಸಹಾಯಧನ ಬಾಕಿ ವಿತರಣೆ ಪೂರ್ತಿ ಮಾಡಲಾಗುವುದು?

ಶ್ರೀ ಶಿವಾನಂದ ಎಸ್. ನಾಯಕ್ (ಸಣ್ಣ ಕೈಗಾರಿಕಾ ಸಚಿವರು) :

ಅ) ರೂ. 423.23 ಕೋಟಿಗಳು

(ದಿನಾಂಕ : 1–1–1999 ರಿಂದ 31–3–2004ರ ಅಂತ್ಯಕ್ಕೆ)

ಆ) ರೂ. 161.00 ಕೋಟಿಗಳು.

ಇ) ರೂ. 256.06 ಕೋಟಿಗಳು.

ಈ) 2006ರ ಮಾರ್ಚ್ ತಿಂಗಳಲ್ಲಿ ರೂ. 69.10 ಕೋಟಿ ಸಹಾಯಧನ ಮಂಜೂರಾತಿ ಬಿಡುಗಡೆ ಮಾಡಲಾಗಿದೆ.

ಉ) ಉಳಿದ ಕೈಗಾರಿಕಾ ಘಟಕಗಳಿಗೆ ಸಹಾಯಧನವನ್ನು ಅನುದಾನ ಲಭ್ಯತೆಯ ಆಧಾರದ ಮೇಲೆ 2006–07 ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

642 (578) ಶ್ರೀ ಡಿ.ಆರ್. ಪಾಟೀಲ್ (ಗದಗ್): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸಲ್ ಮೇಲೆ ವಿಧಿಸಲಾಗಿರುವ ಮಾರಾಟ ಸುಂಕ ಎಷ್ಟು;

ಆ) ರಾಷ್ಟ್ರದಲ್ಲಿ ಇತರ ರಾಜ್ಯಗಳಿಗೆ ಹೋಲಿಸಿದರೆ ಮಾರಾಟ ಸುಂಕದಲ್ಲಿ ನಮ್ಮ ರಾಜ್ಯ ಯಾವ ಸ್ಥಾನದಲ್ಲಿರುವುದು;

ಇ) ಕಳೆದ ಹಣಕಾಸು ವರ್ಷದಲ್ಲಿ ಈ ಬಾಬ್ತಿನಲ್ಲಿ ಸಂಗ್ರಹಿಸಲಾಗಿರುವ ಒಟ್ಟು ಆದಾಯ ಎಷ್ಟು;